**ಪಿ ಅಂಡ್ ಎಸ್‌ಸಿ ಸಂಖ್ಯೆಃ 18/2026 PW.2**

**ಸಾಕ್ಷಿಯನ್ನು ದಿನಾಂಕಃ 15.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

1. ಈ ದಿನ ನನ್ನ ಮುಖ್ಯ ಪರೀಕ್ಷೆಯ ಸಲುವಾಗಿ ಪ್ರಮಾಣೀಕರಿಸಿದ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿದ್ದು, ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ನನ್ನ ಹೇಳಿಕೆಯ ಪ್ರಕಾರ ಬರೆಯಲಾಗಿದ್ದು, ಅವುಗಳನ್ನು ಓದಿ ತಿಳಿದುಕೊಂಡು, ಅದಕ್ಕೆ ನನ್ನ ಸಹಿ ಮಾಡಿದ್ದೇನೆ.

2. ಮೃತ ಕಾಳಮ್ಮ ರವರು ನನ್ನ ಸಮಕ್ಷಮದಲ್ಲಿ ನಿಪಿ.1 ಮೃತ್ಯುಪತ್ರವನ್ನು ಬರೆದುಕೊಟ್ಟಿರುತ್ತಾರೆ. ಅದರ ದೃಢೀಕೃತ ನಕಲನ್ನು ನೋಡುತ್ತಿದ್ದು ಅದರ ಮೇಲೆ ಮೃತ ಕಾಳಮ್ಮ ರವರು ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ನಾನು ಅವರ ಹೆಬ್ಬೆಟ್ಟಿನ ಗುರುತುಗಳನ್ನು ಗುರುತಿಸುತ್ತೇನೆ. ಅದೇ ರೀತಿಯಾಗಿ ನಿಪಿ.1 ಮೃತ್ಯು ಪತ್ರದ ದೃಢೀಕೃತ ನಕಲಿನ ಮೇಲೆ ನನ್ನ ಮತ್ತು ಇನ್ನೊಬ್ಬ ಸಾಕ್ಷಿದಾರರಾದ ಮುರಳಿಧರ ಇವರ ಸಹಿಗಳು ಇರುತ್ತವೆ. ಅವುಗಳನ್ನು ನಾನು ಗುರುತಿಸುತ್ತೇನೆ. ಸಾಕ್ಷಿದಾರರು ನಿಪಿ.1 ದಾಖಲೆಯ ಮೇಲೆ ತನ್ನ ಮತ್ತು ಮುರಳಿಧರ ಇವರ ಸಹಿಗಳನ್ನು ಗುರುತಿಸುತ್ತಾರೆ. ಅದೇ ರೀತಿಯಾಗಿ ಕಾಳಮ್ಮ ಇವರ ಹೆಬ್ಬೆರಳಿನ ಗುರುತನ್ನು ಗುರುತಿಸುತ್ತಾರೆ.

3. ಮೃತ ಕಾಳಮ್ಮ ಇವರು ಮೃತ್ಯು ಪತ್ರವನ್ನು ಬರೆದುಕೊಡುವ ಕಾಲಕ್ಕೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿದ್ದರು ಮತ್ತು ತಾನು ಮಾಡುತ್ತಿರುವ ಕೆಲಸಗಳ ಬಗ್ಗೆ ಸ್ವತಂತ್ರವಾಗಿ ತೀರ್ಮಾನ ಮಾಡುವ ಸಾಮರ್ಥ್ಯ ಇತ್ತು.

**ಪಾಟೀ ಸವಾಲುಃ** ಎದುರುದಾರರು ಯಾರು ಹಾಜರಾಗಿರುವುದಿಲ್ಲ ಕಾರಣ ಪಾಟೀ ಸವಾಲು ಇಲ್ಲ ಎಂದುತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ** ಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಇ.

**(ಮಧ್ವೇಶ ಡಬೇರ)**

4 ನೇ ಅಪರ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ಮಂಡ್ಯ